**ದಿನಾಂಕಃ 13.08.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು – ವಾದಿ ಪರ ವಕೀಲರಿಂದ**

ನಿಡಿ–40 ಮತ್ತು ನಿಡಿ–41ಕ್ಕೆ ಚಾಮಯ್ಯ ಮತ್ತು ಅವರ ಮಗಳು ರಾಜಮ್ಮ ಮೊದಲು ಸಹಿ ಮಾಡಿರುತ್ತಾರೆ. ದಾನ ಪತ್ರ ಮತ್ತು ವಿಲ್ ನಾಮೆಯ ಪ್ರತಿಯೊಂದು ಪುಟಕ್ಕೂ ಚಾಮಯ್ಯರವರು ಸಹಿ ಮಾಡಿರುತ್ತಾರೆ. ಒಟ್ಟು ಎಷ್ಟು ಸಹಿ ಮಾಡಿರುತ್ತಾರೆ ಎಂದು ನೆನಪಿರುವುದಿಲ್ಲ ಕಾರಣ 14 ವರ್ಷಗಳ ಹಿಂದೆ ಈ ದಾಖಲೆಗಳನ್ನು ತಯಾರು ಮಾಡಿರುತ್ತೇನೆ. ಸಾಕ್ಷಿದಾರರ ಸಹಿಗಳನ್ನು ಕೂಡ ಬೆಳಿಗ್ಗೆ ಸದರಿ ದಾಖಲೆಗಳಿಗೆ ಸಬ್ ರಿಜಿಸ್ಟರ್ ಕಛೇರಿಯಲ್ಲಿ ಪಡೆದುಕೊಂಡಿರುತ್ತೇನೆ. ನನ್ನ ಆಫೀಸ್ ನಲ್ಲಿ ಚಾಮಯ್ಯ ಮತ್ತು ರಾಜಮ್ಮ ಸಹಿ ಹಾಕಿದ ನಂತರ ಬೇರೆ ಯಾರ ಸಹಿಯನ್ನು ಪಡೆದುಕೊಂಡಿರುವುದಿಲ್ಲ. 18.06.2014 ರಂದು ಪಕ್ಷಕಾರರು ಮತ್ತು ಸಾಕ್ಷಿದಾರರು ಸಹಿ ಮಾಡಿರುವುದಿಲ್ಲ. ನಿಡಿ–40 ಮತ್ತು ನಿಡಿ–41 ತಯಾರು ಮಾಡುವ ಕಾಲಕ್ಕೆ ಮೂಲ ದಾಖಲೆಗಳನ್ನು ಚಾಮಯ್ಯರವರು ಕೊಟ್ಟಿರುತ್ತಾರೆ. ಚಾಮಯ್ಯರವರು ನನಗೆ ಆರ್ ಟಿ ಸಿ ಕೊಟ್ಟಿರುತ್ತಾರೆ. ಎಂ ಆರ್ ಕಾಪಿ ಕೊಟ್ಟಿರುವುದಿಲ್ಲ. ಚಾಮಯ್ಯರವರಿಗೆ ನಿಡಿ–40 ಮತ್ತು ನಿಡಿ–41 ರ ಆಸ್ತಿ ಹೇಗೆ ಬಂತೆಂದು ತೋರಿಸುವ ಬಗ್ಗೆ ದಾಖಲೆಯನ್ನು ಕೊಟ್ಟಿರುವುದಿಲ್ಲ. ಚಾಮಯ್ಯರವರ ಉಳಿದ ಮಕ್ಕಳ ಎನ್ ಒ ಸಿ ಬೇಕೆಂದು ಕೇಳಿರುವುದಿಲ್ಲ. ನಿಡಿ–40 ಮತ್ತು ನಿಡಿ–41 ದಾಖಲೆಗಳನ್ನು ತಯಾರು ಮಾಡುವ ಕಾಲಕ್ಕೆ ಚಾಮಯ್ಯರವರ ಆರೋಗ್ಯ ಸರಿಯಿರಲಿಲ್ಲ ಮತ್ತು ನಾನು ಹೇಳಿದ ವಿಚಾರಗಳನ್ನು ಅರ್ಥ ಮಾಡಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ನಾನು ಚಾಮಯ್ಯ ಮತ್ತು ಅವರ ಮಕ್ಕಳ ಮಾತು ಕೇಳಿ ಅವರ ಆರೋಗ್ಯ ಚೆನ್ನಾಗಿತ್ತೆಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಮಯ್ಯರವರ ಮಗಳು ಆಸ್ಪತ್ರೆಗೆಂದು ನನ್ನನ್ನು ಕರೆದುಕೊಂಡು ಹೋಗಿ ಸುಳ್ಳು ದಾಖಲೆಯನ್ನು ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಲು ನಾನು ಸಹಾಯ ಮಾಡಿದ್ದೇನೆ ಎಂದು ಹೇಳುವುದು ಸುಳ್ಳು. ನಿಡಿ–40 ಮತ್ತು ನಿಡಿ–41 ರ ಸ್ವತ್ತು ಒಟ್ಟು ಕುಟುಂಬದ ಆಸ್ತಿಯಾಗಿತ್ತೆಂದು ಹೇಳುವುದು ಸುಳ್ಳು.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.